ಮೊಬೈಲ್ ನಂ. 9448120305

# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

ನಂ. 759, 8ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಆರ್.ಟಿ.ನಗರ ಬೆಂಗಳೂರು – 560032

ದಿನಾಂಕ: 22.09.2014

ಇಂದ,
ಎ.ಟಿ. ರಾಮಸ್ವಾಮಿ ಮಾಜಿ ಅಧ್ಯಕ್ಷರು
ಜಂಟಿ ಸದನ ಸಮಿತಿ

ರವರಿಗೆ,
ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ರವರು,
ಮಾನ್ಯ ಮುಖ್ಯಮಂತ್ರಿಗಳು
ವಿಧಾನಸೌಧ, ಕರ್ನಾಟಕ ಸರ್ಕಾರ
ಬೆಂಗಳೂರು

ಸನ್ಮಾನ್ಯರೇ

ತಾವು ದಿನಾಂಕ 19.09.2014, ಶುಕ್ರವಾರದಂದು ಭೂ ಒತ್ತುವರಿ ಬಗ್ಗೆ ನೀಡಿರುವ ಪತ್ರಿಕಾ ವರಧಿಯನ್ನು ಗಮನಿಸಿರುತ್ತೇನೆ. ಅಧಿಕಾರಿ ವರ್ಗದವರು ತಮಗೆ ತಪ್ಪು ಮಾಹಿತಿಗಳನ್ನು ಒದಗಿಸಿರುತ್ತಾರೆ.

ಸರ್ಕಾರಿ ಭೂಮಿ ಒತ್ತುವರಿ ತೆರುವಿನ ಬಗ್ಗೆ ಮಾತ್ರ ಸರ್ಕಾರ ಮಾತನಾಡುತ್ತಿದೆ. ಆದರೆ ಅದು ಅಷ್ಟೊಂದು ಗಂಭೀರ ಸ್ವರೂಪದ್ದಾಗಿರುವುದಿಲ್ಲ. ಬಲಾಢ್ಯರು ಮತ್ತು ಪ್ರಭಾವಶಾಲಿಗಳು ಹಣದಾಸೆಗಾಗಿ ನಕಲು ದಾಖಲೆಗಳ ಸೃಷ್ಠಿಯ ಮೂಲಕ ಮಾಡಿರುವ ಭೂಕಬಳಿಕೆಯ ಬಗ್ಗೆ ಒಮ್ಮೆಯು ಚರ್ಚಿಸದಿರುವುದು ಅತ್ಯಂತ ದುರದೃಷ್ಟಕರ. ಇಂತಹ ಭೂ ಕಬಳಿಕೆಗಳು ಅತ್ಯಂತ ಗಂಭೀರ ಮತ್ತು ಕ್ರಿಮಿನಲ್ ಸ್ವರೂಪದ ಪ್ರಕರಣಗಳಾಗಿರುತ್ತವೆ. ನಮ್ಮ ಭೂ ಕಬಳಿಕೆಯ ವಿರೋಧಿ ಹೋರಾಟ ಸಮಿತಿಯ ಮುಖ್ಯ ಉದ್ದೇಶವೆ **"ನಕಲಿ ದಾಖಲೆಗಳನ್ನು ಸೃಷ್ಠಿಸಿ ಕೊಂಡಿರುವವರ ಮೇಲೆ ಕ್ರಮಕೈಗೊಂಡು ಭೂಮಿತಾಯಿ ರಕ್ಷಿಸಿ"** ಎಂಬುದೆ ಮುಖ್ಯವಾಗಿರುತ್ತದೆ.

ತಮ್ಮ ಹೇಳಿಕೆಯ ಪ್ರಕಾರ ಜಂಟಿ ಸದನ ಸಮಿತಿ ವರದಿಯಂತೆ ಬೆಂಗಳೂರು ನಗರ / ನಗರ ಜಿಲ್ಲೆಯಲ್ಲಿ ಒತ್ತುವರಿಯಾಗಿರುವ ವಿಸ್ತೀರ್ಣ 34,110 ಎಕರೆ ಎಂದು ವರದಿಯಾಗಿರುತ್ತದೆ. ಆ ಪೈಕಿ 14,393 ಎಕರೆ ಒತ್ತುವರಿಯನ್ನು ತೆರವುಗೊಳಿಸಿರುವುದಾಗಿ, ನಾಗರೀಕ ಸೌಲಭ್ಯಕ್ಕಾಗಿ 7879 ಎಕರೆ ಬಳಸಿಕೊಂಡಿರುವುದಾಗಿಯು, 6792 ಎಕರೆ ವಿಸ್ತೀರ್ಣವು ಬಗರ್ ಹುಕುಂ ಸಮಿತಿ

ಮುಂದಿರುವುದಾಗಿ ತಿಳಿಸಿರುತ್ತೀರಿ. ಇನ್ನೂ ಕೇವಲ 5046 ಎಕರೆ ಒತ್ತುವರಿಯನ್ನು ತೆರವು ಮಾಡಬೇಕಾಗಿದ್ದು, ಅದನ್ನು ಯಾವುದೇ ಮುಲಾಜು ಇಲ್ಲದೆ ತೆರವು ಗೊಳಿಸುವುದಾಗಿ ಹೇಳಿರುತ್ತೀರಿ.

ನಾಗರೀಕ ಸೌಲಭ್ಯಕ್ಕಾಗಿ 7879 ಎಕರೆ ವಿಸ್ತೀರ್ಣವನ್ನು ಬಳಸಿಕೊಂಡಿರುವುದಾಗಿ ತಿಳಿಸಿರುತ್ತೀರಿ. ಸರ್ಕಾರಿ ಭೂಮಿಯನ್ನು ಮುಂದಿನ ಭವಿಷ್ಯದ ಸಾರ್ವಜನಿಕರ ಉದ್ದೇಶಕ್ಕಾಗಿ ಮೀಸಲಿಡಬೇಕೆಂದು ಸಮಿತಿಯು ಅಭಿಪ್ರಾಯಪಟ್ಟಿತ್ತು. ಅದರಂತೆ ನಾಗರೀಕ ಸೌಲಭ್ಯಕ್ಕಾಗಿ 7879 ಎಕರೆ ಜಮೀನನ್ನು ಮೀಸಲಿಟ್ಟಿರುವ ವಿವರಗಳನ್ನು ಒದಗಿಸಿದರೆ ತಮಗೆ ನಾನು ಉಪಕೃತನಾಗಿರುತ್ತೇನೆ. ಆದರೆ ಆ ವಿಸ್ತೀರ್ಣವನ್ನು ಸಂಘ ಸಂಸ್ಥೆಗಳು ಒತ್ತುವರಿಮಾಡಿಕೊಂಡಿರುವುದನ್ನು, ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವುದಾಗಿ ತಿಳಿಸಿರುವುದು ಎಷ್ಟರ ಮಟ್ಟಿಗೆ ಸರಿ ಇರುತ್ತದೆ.

6792 ಎಕರೆ ವಿಸ್ತೀರ್ಣವು ಬಗರ್ ಹುಕುಂ ಸಮಿತಿಯ ಮುಂದುರಿವುದಾಗಿ ತಿಳಿಸಲಾಗಿದೆ. ಆದರೆ ಸದರಿ ವಿಸ್ತೀರ್ಣವು ತಪ್ಪಾಗಿರುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯ ಪರಿಮಿತಿಯಿಂದ 18 ಕಿ.ಮೀ ವ್ಯಾಪ್ತಿಯ ಒಳಗಡೆ ಬಗರ್ ಹುಕುಂ ಸಮಿತಿಯಿಂದ ಭೂ ಮಂಜೂರಾತಿಯನ್ನೇ ಮಾಡುವಂತಿಲ್ಲ. ಹಾಗಾಗಿ ಮೇಲ್ಕಂಡ ವಿಸ್ತೀರ್ಣದ ಪೈಕಿ ಎಷ್ಟು ಎಕರೆ 18 ಕಿ.ಮೀ ವ್ಯಾಪ್ತಿಯ ಒಳಗಡೆ ಬರುತ್ತದೆ ಮತ್ತು ಮಂಜೂರಾತಿಯನ್ನೇ ಮಾಡಲು ಅವಕಾಶ ಇಲ್ಲದಿರುವಾಗ, ಆ ಒತ್ತುವರಿಯನ್ನು ಬಗರ್ ಹುಕುಂ ಸಮಿತಿಯ ಮುಂದಿರುವುದಾಗಿ ತಿಳಿಸಿರುವ ಅಂಕಿ ಅಂಶವು ಸರಿ ಇಲ್ಲದಿದ್ದು, ಸಾರ್ವಜನಿಕರಿಗೆ ತಪ್ಪು ಮಾಹಿತಿ ನೀಡಿದಂತಾಗಿರುತ್ತದೆ.

ನಮ್ಮ ಸಮಿತಿಯ ವರದಿಯ ಪ್ರಕಾರ ವಿವಿಧ ಇಲಾಖೆಗಳ ಒತ್ತುವರಿಯಾಗಿರುವ ವಿಸ್ತೀರ್ಣ 41303 ಎಕರೆಗಳು. ಇನ್ನೂ ಪತ್ತೆ ಹಚ್ಚಬೇಕಾಗಿರುವ ಒತ್ತುವರಿ ವಿಸ್ತೀರ್ಣವು ಬಾಕಿ ಉಳಿದಿತ್ತು. ಕಾರಣ ಸಮಿತಿಯು 17 ತಿಂಗಳುಗಳ ಕಾಲಮಾತ್ರ ಕಾರ್ಯನಿರ್ವಹಿಸಲು ಅವಕಾಶ ದೊರಕಿತ್ತು. 41303 ಎಕರೆ ಒತ್ತುವರಿ ವಿಸ್ತೀರ್ಣದ ವಿವರಗಳುಳ್ಳ ಮಾಹಿತಿಯನ್ನು (ಅನುಬಂಧ – 1) ಲಗತ್ತಿಸಿರುತ್ತೇನೆ. ಸಮಿತಿಯು ಪತ್ತೆ ಹಚ್ಚಿರುವ 41303 ಎಕರೆ ವಿಸ್ತೀರ್ಣದ ಬದಲಿಗೆ, 34110 ಎಕರೆ ಎಂದು ಮಾಹಿತಿ ನೀಡಿರುವುದು ಸತ್ಯಕ್ಕೆ ದೂರವಾಗಿರುತ್ತದೆ.

ಎಲ್ಲಕ್ಕಿಂತ ಮಿಗಿಲಾಗಿ ಸರ್ಕಾರದ ಆಸ್ತಿಗೆ ಸಂಬಂಧಪಟ್ಟಂತೆ ಸುಳ್ಳುದಾಖಲೆಗಳನ್ನು ಸೃಷ್ಠಿಸಿಕೊಂಡು ಮಾಲೀಕತ್ವವನ್ನು ಪಡೆದುಕೊಂಡಿರುವುದು. ಸರ್ಕಾರದ ಆಸ್ತಿ ವ್ಯವಹಾರದಲ್ಲಿ ಮೋಸ, ವಂಚನೆ, ಅವ್ಯವಹಾರಗಳನ್ನು ಮಾಡಿರುವಂತಹ ಎದ್ದು ಕಾಣುವ ಕೆಲವು ನಿದರ್ಶನಗಳನ್ನು ಸಮಿತಿಯ ವರದಿಗಳಲ್ಲಿ ಪ್ರಸ್ತಾಪಿಸಲಾಗಿದೆ. ಈ ಅವ್ಯವಹಾರಗಳು ಇಡೀ ಸರ್ಕಾರ ಮತ್ತು ಸಮಾಜವನ್ನು ಮೋಸಗೊಳಿಸುವ ಷಡ್ಯಂತ್ರಗಳಾಗಿರುತ್ತವೆ. ಭೂ ಮಾಫಿಯಾದವರು ಸರ್ಕಾರದ ವಿರುದ್ಧವೆ ಸೆಡ್ಡು ಹೊಡೆದು ಆಕ್ರಮಗಳಲ್ಲಿ ತೊಡಗಿ, ಕ್ರಿಮಿನಲ್ ಸ್ವರೂಪದ ಕೃತ್ಯಗಳನ್ನು ಮಾಡಿದ್ದರೂ, ಇದುವರೆವಿಗೂ ಅಂತಹವರ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಂಡಿರುವುದು ಕಂಡುಬರುವುದಿಲ್ಲ ಮತ್ತು ಅದಕ್ಕೆ ಪೂರ್ವಕವಾಗಿ ಸಹಕರಿಸಿ ಶಾಮೀಲಾಗಿರುವ ಅಧಿಕಾರಿ/

ನೌಕರರ ಮೇಲು ಕ್ರಮಗಳಾಗದೆ ಇರುವುದರಿಂದ, ಇನ್ನು ಸಹ ನಿರಂತರವಾಗಿ ಪೋರ್ಜರಿ ಪ್ರಕರಣಗಳು ಮುಂದುವರೆದಿರುತ್ತವೆ, ಕ್ರಮಗಳೆನಿದ್ದರೂ ಕನಿಷ್ಠ ಅವಶ್ಯಕತೆಗಾಗಿ (ಜೀವನೋಪಯಕ್ಕಾಗಿ) ಒತ್ತುವರಿ ಮಾಡಿಕೊಂಡಿರುವ ಬಡವರ ವಿರುದ್ಧವೇ ಆಗಿರುತ್ತದೆ. ಕಾರಣ ಅವರ ಬಳಿ ಯಾವುದೇ ಸುಳ್ಳು ದಾಖಲೆಗಳನ್ನು ಸೃಷ್ಠಿಮಾಡಿಕೊಂಡಿರುವ ದಾಖಲೆಗಳಿರುವುದಿಲ್ಲ. ಎರಡನೇ ಮಧ್ಯಂತರ ವರಧಿಯ ಕೊನೆಯಲ್ಲಿ ಆ ಬಗ್ಗೆ ಸಮಿತಿಯ ಅಧ್ಯಕ್ಷರು ವ್ಯಕ್ತಪಡಿಸಿರುವ ಅಭಿಪ್ರಾಯದ ಮಾಹಿತಿಯನ್ನು ಲಗತ್ತಿಸಿರುತ್ತೇನೆ. (ಅನುಬಂಧ – 2)

**ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಹಕ್ಕು ಸ್ಥಾಪಿಸಿಕೊಂಡಿರುವವರು ನೆಮ್ಮದಿಯಾಗಿರುತ್ತಾರೆ. ಅವರು ಒತ್ತುವರಿ ದಾರರಾಗಿರುವುದಿಲ್ಲ. ಬದಲಿಗೆ ಹಕ್ಕುದಾರರೆಂದು ಸರ್ಕಾರ ಭಾವಿಸಿರುತ್ತದೆ. ಸರ್ಕಾರದ ಲೆಕ್ಕದಲ್ಲಿ ಅವರೆಲ್ಲಾ ಅಧಿಕೃತ ಭೂಮಾಲೀಕರಾಗಿರುತ್ತಾರೆ. ಇದೊಂದು ದೊಡ್ಡ ವಿಪರ್ಯಾಸವಲ್ಲವೆ? ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಹಕ್ಕು ಸ್ಥಾಪಿಸಿಕೊಂಡಿರುವವರು ಅತ್ಯಂತ ಬಲಾಢ್ಯರು ಮತ್ತು ಪ್ರಭಾವಶಾಲಿಗಳೆ ಆಗಿರುತ್ತಾರೆ. "ಬಲಾಢ್ಯರಿಗೆ ರಕ್ಷಣೆ ಮತ್ತು ಬಡವರಿಗೆ ಶಿಕ್ಷೆ ನೀಡುತ್ತಿರುವುದು ಯಾವ ಸಾಮಾಜಿಕ ನ್ಯಾಯ ವಾಗುತ್ತದೆ"**

ಸರ್ಕಾರದ ಸ್ವತ್ತಿಗೆ ಸುಳ್ಳು ದಾಖಲೆ ಸೃಷ್ಠಿಯು ಬೃಹದಾಕಾರದ ಸಮಸ್ಯೆಯಾಗಿರುತ್ತದೆ. ನಾವು ಸಂಗ್ರಹಿಸಿರುವ ಮಾಹಿತಿಯು ಬೃಹದಾರಕಾರದ ಸಮಸ್ಯೆಯ ತುಣುಕು ಮಾತ್ರವಾಗಿರುತ್ತದೆ. ಆಡಳಿತದಲ್ಲಿರುವ ಅಧಿಕಾರಿ/ನೌಕರರು ಅಂತಹ ಸುಳ್ಳುದಾಖಲೆಗಳ ಸೃಷ್ಠಿಯಲ್ಲಿ ಶಾಮೀಲಾಗಿರುವುದರಿಂದ ಮಾಹಿತಿ ಸಂಗ್ರಹವು ಒಂದು ದೊಡ್ಡ ಸವಾಲ್ ಆಗಿರುವುದರಿಂದ ಸರ್ಕಾರವು ಹೆಚ್ಚಿನ ಗಮನ ಹರಿಸಬೇಕಾಗಿರುತ್ತದೆ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿನ ಉತ್ತರ (ಅಪರ) ತಾಲ್ಲೂಕಿಗೆ ಸೇರಿದ ಜಾಲಹೋಬಳಿ ಯೊಂದರಲ್ಲಿಯೆ ಸೃಷ್ಠಿತ ಅಕ್ರಮ ಭೂ ಮಂಜೂರಾತಿಯು 2306 ಎಕರೆಗಳ ಮಾಹಿತಿ ದೊರಕಿರುತ್ತದೆ. ಇನ್ನು ಆ ಹೋಬಳಿ ಒಂದರಲ್ಲಿಯೇ ಹೆಚ್ಚಿನ ಸೃಷ್ಠಿತ ಭೂ ಮಂಜುರಾತಿ ಮಾಹಿತಿಯನ್ನು ಸಂಗ್ರಹಿಸಬೇಕಾಗಿರುತ್ತದೆ. (ಅನುಬಂಧ–3) ಲಗತ್ತಿಸಿದೆ. ಸಮಿತಿಯ ವರದಿಯ ನಂತರವು ಸೃಷ್ಠಿತ ಅಕ್ರಮ ಭೂ ಮಂಜೂರಾತಿಯನ್ನು ಆಧರಿಸಿ ಖಾತೆಯನ್ನು ಮಾಡಿಸಿಕೊಂಡು, ಮಾರಾಟಮಾಡುತ್ತಿರುವುದು ನಿರಂತರವಾಗಿ ನಡೆಯುತ್ತಲೆ ಇರುತ್ತದೆ.

ಮತ್ತೊಂದು ಉದಾಹರಣೆ ಎಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹೋಬಳಿ, ಶಾಂತನಪುರ ಗ್ರಾಮದ ಸ.ನಂ. 9 ರಲ್ಲಿನ 261.13 ಎಕರೆ ಸರ್ಕಾರಿ ಜಮೀನಿಗೆ ಸುಳ್ಳು ದಾಖಲೆ ಸೃಷ್ಠಿಸಿ ಮಂಜೂರುಮಾಡಿರುವ ವಿಷಯವು ವಿಚಾರಣೆಯಿಂದ ದೃಢಪಟ್ಟಿರುವುದಾಗಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ. ಆ ಪ್ರಕರಣಗಳಲ್ಲಿ ಶಾಮೀಲಾಗಿರುವ ತಾಲ್ಲೂಕು ತಹಶೀಲ್ದಾರರು, ಶಿರಸ್ತೆದಾರರು, ರಾಜಸ್ವ ನಿರೀಕ್ಷಕರು, ಮೋಜಣಿದಾರರು, ಗ್ರಾಮ ಲೆಕ್ಕಿಗರು ಮುಂತಾದವರುಗಳ ಮೇಲೆ ಕ್ರಮ ಜರುಗಿಸಲು ಕಂದಾಯ ಸಚಿವರ ಆದೇಶಕ್ಕಾಗಿ ಸುಮಾರು ಒಂದು ವರ್ಷದ ಹಿಂದೆಯೆ ಪತ್ರ ಬರೆದಿದ್ದು, ಇದುವರೆವಿಗೂ ಯಾವುದೇ ಕ್ರಮಗಳಾಗಿರುವುದಿಲ್ಲ (ಅನುಬಂಧ–4

ಲಗತ್ತಿಸಿದೆ) ಪೋರ್ಜರಿಯಂತಹ ಕ್ರಿಮಿನಲ್ ಸ್ವರೂಪದ ಪ್ರಕರಣ ನಡೆದಿರುವುದು ಅಧಿಕೃತವಾಗಿ ತಿಳಿದಿದ್ದರು ತಮಗೆ ದತ್ತವಾಗಿರುವ ಅಧಿಕಾರಿವನ್ನು ಚಲಾಯಿಸದೆ ಮತ್ತೊಬ್ಬರಿಗೆ ಪತ್ರ ರವಾನಿಸಿ ಕೈಚೆಲ್ಲಿ ಕುಳಿತುಕೊಂಡಿರುವುದು, ತುಕ್ಕು ಹಿಡಿದ ಆಡಳಿತದ ನಿದರ್ಶನವಲ್ಲವೆ? ಮೇಲಿನಿಂದ ಕೆಳಗಿನ ಹಂತದ ಅಧಿಕಾರಿ/ ನೌಕರರು ಶಾಮೀಲಾಗಿರುವುದರಿಂದಲೇ ಯಾವುದೇ ಭಯವಿಲ್ಲದೆ ನಿರಾತಂಕವಾಗಿ ಅಕ್ರಮಗಳು ನಡೆಯುತ್ತಿರುತ್ತವೆ.

ಕಂದಾಯ ಇಲಾಖೆಯ ಮಾಹಿತಿಯ ಪ್ರಕಾರ ಬೆಂಗಳೂರು ನಗರ / ನಗರ ಜಿಲ್ಲೆಯ ಕಂದಾಯ ಇಲಾಖೆಯೊಂದರಲ್ಲಿಯೇ 10956 ಎಕರೆ ಸರ್ಕಾರಿ ಭೂಮಿಗೆ ಸುಳ್ಳು ದಾಖಲೆ ಸೃಷ್ಟಿಯಾಗಿರುವುದಾಗಿ ಕಂದಾಯ ಇಲಾಖೆಯ ವರದಿ ಇರುತ್ತದೆ. (ಅನುಬಂಧ-5) ಲಗತ್ತಿಸಿದೆ. ಇನ್ನುಳಿದ ಸರ್ಕಾರದ ವಿವಿಧ ಇಲಾಖೆಗಳ, ಶಾಸನಾತ್ಮಕ ಮತ್ತು ಶಾಸನಾತ್ಮಕವಲ್ಲದ ಸಂಘ ಸಂಸ್ಥೆಗಳಲ್ಲಿ ನಡೆದಿರುವ ಸುಳ್ಳು ದಾಖಲೆಗಳ ಸೃಷ್ಟಿಯ ಪ್ರಮಾಣ ದೊಡ್ಡ ಗಾತ್ರದ್ದೆ ಆಗಿರುತ್ತದೆ.

ಒಂದು ದೊಡ್ಡ ಆಘಾತಕಾರಿ ಮತ್ತು ಎಲ್ಲರೂ ಬೆಚ್ಚಿಬೀಳುವಂತ ಸಂಗತಿಗಳೆಂದರೆ, ಭೂಕಂದಾಯ ಖಾಯ್ದೆ ಕಲಂ 136 (3) ರ ಅಡಿ ವಿಶೇಷ ಜಿಲ್ಲಾಧಿಕಾರಿಗಳ ಮುಂದೆ ವಿಚಾರಣೆಗೊಳಪಟ್ಟ ಸರ್ಕರದ ಸ್ವತ್ತಿಗೆ ಸುಳ್ಳು ದಾಖಲೆಯ ಪ್ರಕರಣಗಳು ಹೇಗೆ ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿ, ದೋಷಪೂರಿತ ಆದೇಶಗಳಾಗಿರುತ್ತವೆ ಮತ್ತು ಭೂಗಳ್ಳರಪರವಾಗಿ ಆದೇಶಗಳಾಗಿರುವುದಾಗಿ ತನಿಖಾಸಂಸ್ಥೆಯ ವರದಿಯಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. (ಅನುಬಂಧ 6) ಲಗತ್ತಿಸಿದೆ. ಸರ್ಕಾರದ ಅಧಿಕಾರಿಗಳೆ ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿ ದೋಷಪೂರಿತ ಆದೇಶಮಾಡಿದ್ದರು, ಅಂತಹ ಅಧಿಕಾರಿಗಳ ಮೇಲೆ ಯಾವುದೇ ಕ್ರಮಗಳಾಗಿರುವುದಿಲ್ಲ.

ಮತ್ತೊಂದು ಅಚ್ಚರಿಯ ಸಂಗತಿಯೆಂದರೆ, ಬೈಯಪ್ಪನಹಳ್ಳಿಯಲ್ಲಿರುವ ಪೂರ್ವಾಂಕರ ಬಿಲ್ಡರ್ಸ್ ರವರಿಗೆ ರಸ್ತೆಗೆ ಸಂಬಂದಪಟ್ಟ 4 ಕ್ರಯಪತ್ರಗಳನ್ನು ಮಾಡಿರುವುದು. ಅದರ ವಿಸ್ತೀರ್ಣ 39910 ಚ.ಅ (ಅನುಬಂಧ – 7) ಲಗತ್ತಿಸಿದೆ.

ಬೈರಸಂದ್ರ ಕೆರೆ ಅಂಗಳವನ್ನೇ ಬ್ಯಾಂಕಿನಲ್ಲಿ ಒತ್ತೆ ಇಟ್ಟು ಸಾಲಪಡೆದಿದ್ದರು, ಅಕ್ರಮಗಳಲ್ಲಿ ಭಾಗಿಗಳಾದವರ ಮೇಲೆ ಕ್ರಮಕೈಗೊಳ್ಳದೆ ಉಧಾರತೆ ತೋರಿರುವುದು ಕೆಟ್ಟ ಮತ್ತು ಭ್ರಷ್ಠ ಆಡಳಿತಕ್ಕೆ ಹಿಡಿದ ಕನ್ನಡಿಯಲ್ಲವೆ? (ಅನುಬಂಧ – 8) ಲಗತ್ತಿಸಿದೆ.

ಇಡೀ ಆಡಳಿತವೆ ತಲೆ ತಗ್ಗಿಸುವ ವಿಷಯವೇನೆಂದರೆ, ಭೂಕಬಳಿಕೆ ಮಾಡಿರುವವರು ವಸತಿ ಮತ್ತು ವಾಣಿಜ್ಯ ನಿವೇಶನಗಳನ್ನು ಮಾಡಿಕೊಂಡಿರುವವರುಗಳು ಪ್ರಭಾವಿ ಹಾಗೂ ಗಣ್ಯವ್ಯಕ್ತಿಗಳಾಗಿದ್ದು, ಕ್ರಮಕೈಗೊಳ್ಳುವುದು ಕಷ್ಟಕರವೆಂದು ತಿಳಿಸಿರುವುದಾಗಿರುತ್ತದೆ. ಇಂತಹ ಇನ್ನೂ ಹಲವಾರು ಗಂಬೀರ ಪ್ರಕರಣಗಳಿರುತ್ತವೆ.

ಮೇಲ್ಕಂಡ ಪ್ರಕರಣಗಳು ಕೆಲವು ನಿದರ್ಶನಗಳಾಗಿದ್ದು, ಇಂತಹ ಸಾವಿರಾರು ಪ್ರಕರಣಗಳಿದ್ದು ಇಡೀ ಸಮಾಜವನ್ನೇ ತಲ್ಲಣಗೊಳಿಸುವಂತವುಗಳಾಗಿರುತ್ತವೆ. ಇಂತಹ ಪ್ರಕರಣಗಳನ್ನು ನೋಡಿದಾಗ,

ಕಾನೂನು ಮತ್ತು ರಾಜಕೀಯ ವ್ಯವಸ್ಥೆಯ ಉದಾತ್ತ ಉದಾರತೆಯ ಪರಿಯೋಜನಗಳು ಶ್ರೀಮಂತರು ಮತ್ತು ಬಲಿಷ್ಠರಾದವರಿಗೆ ದಕ್ಕುತ್ತಿದೆ. ಆದರೆ ಕಾನೂನಿನ ಕಠೋರ ಘಾತ ಮಾತ್ರ ಸಮಾಜದ ಬಡವರಿಗೆ ತಗಲುತ್ತಿದೆ.

ನಾನು ತಮಗೆ ಕೆಲವೊಂದು ಮುಖ್ಯ ಬೇಡಿಕೆಗಳನ್ನೊಳಗೊಂಡಂತೆ ದಿನಾಂಕ 26-08-2014 ರಂದು ತಮಗೆ ಬರೆದಿರುವ ಪತ್ರದ ಪ್ರತಿಯನ್ನು ಲಗತ್ತಿಸಿರುತ್ತೇನೆ. (ಅನುಬಂಧ-9)

ಆದುದರಿಂದ ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ಜರೂರು ಕ್ರಮಗಳ ಅವಶ್ಯಕತೆ ಇರುವುದರಿಂದ, ವಾಸ್ತವಾಂಶಗಳ ಮೇಲೆ ರಾಜ್ಯದ ಹಿತ ಕಾಪಾಡಲು ತುರ್ತು ಕ್ರಮತೆಗೆದುಕೊಳ್ಳಬೇಕೆಂದು ವಿನಯಪೂರ್ವಕವಾಗಿ ಒತ್ತಾಯಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಸ್ಥಳ: ಧರಣಿಸತ್ಯಾಗ್ರಹ
ಪುರಭವಾನ ಮುಂಭಾಗ, ಬೆಂಗಳೂರು

(ಎ.ಟಿ. ರಾಮಸ್ವಾಮಿ)

ಅನುಬಂಧ-1

## ಅಂತಿಮ ವರದಿ

| ಕ್ರ.ಸಂ | ಇಲಾಖೆ | ಒತ್ತುವರಿಯಾಗಿರುವ ವಿಸ್ತೀರ್ಣ ಎಕರೆ / ಗುಂಟೆ | ಒತ್ತುವರಿ ದಾರರ ಸಂಖ್ಯೆ |
|---|---|---|---|
| 1 | ಕಂದಾಯ ಇಲಾಖೆ | 33877.00 | 35666 |
| 2 | ಅರಣ್ಯ ಇಲಾಖೆ | | |
| | 1)ಬೆಂಗಳೂರು ನಗರ ವಿಭಾಗ- | 1099.00 | 312 |
| | 2)ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ- | 812.00 | 560 |
| | 3)ಅರಣ್ಯ ಇಲಾಖೆ ಕೆರೆಗಳು (ಬೆಂಗಳೂರು ನಗರ) | 312.33 | 553 |
| | (ಅರಣ್ಯ ಒಟ್ಟು) | 2223.33 | 1425 |
| 3 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | 2878.00 | 4595 |
| 4 | ವಕ್ಫ್ ಮಂಡಳಿ | 263.18 | 446 |
| 5 | ಸಹಕಾರ ಇಲಾಖೆ | 7.06 | 01 |
| 6 | ಪಶುಪಾಲನಾ ಇಲಾಖೆ | 53.26 | 248 |
| 7 | ಮುಜರಾಯಿ | 61.03 | 199 |
| 8 | ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ | 12.19 | 205 |
| 9 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 13.09 | 124 |
| 10 | ಬೆಂಗಳೂರು ವಿಶ್ವವಿದ್ಯಾಲಯ | 13.19 1/4 | 56 |
| 11 | ಕೆರೆ/ಸರೋವರ/ಜಲಮೂಲ ಪ್ರದೇಶ | 1848.00 | 2488 |
| 12 | ಕರ್ನಾಟಕ ಗೃಹ ಮಂಡಳಿ | 34.00 | 302 |
| 13 | ಕೆ.ಐ.ಎ.ಡಿ.ಬಿ | 10.25 | 104 |
| 14 | ಕೃಷಿ | 3.19 | 03 |
| 15 | ನಿಮ್ಹಾನ್ಸ್ | 3.26 | 01 |
| | ಒಟ್ಟು | 41303.03 1/4 | 45863 |

19/11/2007.

ಎ.ಟಿ.ರಾಮಸ್ವಾಮಿ
ಅಧ್ಯಕ್ಷರು
ಜಂಟಿ ಸದನ ಸಮಿತಿ

ಅನುಬಂಧ – 2

## 21. ನಿಷ್ಕ್ರಿಯ ಆಡಳಿತದಿಂದ ತಪ್ಪಿತಸ್ಥರಿಗೆ ರಕ್ಷಣೆ ದೊರಕುತ್ತಿರುವ ಬಗ್ಗೆ.

ಸರ್ಕಾರದ ಆಸ್ತಿಗೆ ಸಂಬಂಧಪಟ್ಟಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಮೋಸ, ವಂಚನೆ, ಅವ್ಯವಹಾರಗಳನ್ನು ಮಾಡಿರುವಂತಹ, ಎದ್ದು ಕಾಣುವ ಹಲವಾರು ನಿದರ್ಶನಗಳಿವೆ. ಈ ಅವ್ಯವಹಾರಗಳು ಪೂರ್ವಯೋಜಿತವಾದವುಗಳಾಗಿದ್ದು, ಇಡೀ ಸರ್ಕಾರ ಮತ್ತು ಸಮಾಜವನ್ನು ಮೋಸಗೊಳಿಸುವ ಷಡ್ಯಂತ್ರವಾಗಿರುತ್ತವೆ. ಭೂ ಮಾಫಿಯಾದವರು ಸರ್ಕಾರದ ವಿರುದ್ಧವೇ ಸೆಡ್ಡು ಹೊಡೆದು ಅಕ್ರಮಗಳಲ್ಲಿ ತೊಡಗಿ, ಕ್ರಿಮಿನಲ್ ಸ್ವರೂಪದ ಕೃತ್ಯಗಳನ್ನು ಮಾಡಿದ್ದರೂ ಇದುವರೆವಿಗು ಯಾರದೇ ವಿರುದ್ಧ ಕಠಿಣ ಕ್ರಮಕೈಗೊಂಡಿರುವುದು ಕಂಡುಬಂದಿರುವುದಿಲ್ಲ. ಕ್ರಮಗಳೇನಿದ್ದರೂ, ಕನಿಷ್ಠ ಅವಶ್ಯಕತೆಗಾಗಿ ಒತ್ತುವರಿ ಮಾಡಿಕೊಂಡಿರುವ ಬಡವರ ವಿರುದ್ಧವೇ ಆಗಿರುತ್ತದೆ. ಇದರಿಂದ ಅಕ್ರಮ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವವರು ಮತ್ತು ಅಕ್ರಮ ವ್ಯವಹಾರಗಳನ್ನು ಮಾಡಲು ಉತ್ತೇಜಿಸಿ ಸಹಕರಿಸಿರುವ ಅಧಿಕಾರಿಗಳು ನಿರ್ಭೀತಿಯಿಂದ ಇರುವುದರಿಂದಲೇ, ನಿರಂತರವಾಗಿ ಅವ್ಯವಹಾರಗಳು ನಡೆಯುತ್ತಿದ್ದು, ಸರ್ಕಾರದ ಆಡಳಿತದ ಬಗ್ಗೆ ಜನಸಾಮಾನ್ಯರಲ್ಲಿ ವಿಶ್ವಾಸ ಕುಂದುತ್ತಿದೆ. ವ್ಯವಸ್ಥೆಗೆ ಸೇರಿದ ಕೆಲವೇ ಕೆಲವು ವ್ಯಕ್ತಿಗಳಿಂದ ದಿನನಿತ್ಯವು ಶೋಷಣೆ ಮತ್ತು ಅನ್ಯಾಯಗಳು ನಿರಂತರವಾಗಿ ನಡೆಯುತ್ತಿದ್ದು, ಅವರಿಗೆ ಕಾನೂನು ಅನ್ವಯಿಸುವುದಿಲ್ಲವೆಂಬ ಭಾವನೆ ಬಂದಲ್ಲಿ, ನಾವು ಇಷ್ಟೊಂದು ಹೆಮ್ಮೆ ಪಡುವಂತಹ ಕಾನೂನು ಮತ್ತು ನ್ಯಾಯ ಎಂಬ ಗೌರವಾನ್ವಿತ ತತ್ವಗಳು ತಮ್ಮ ಗಹನ ಅರ್ಥವನ್ನು ಕಳೆದುಕೊಳ್ಳುತ್ತವೆ. ಈಗಲಾದರು ಸರ್ಕಾರ ಎಚ್ಚೆತ್ತುಕೊಂಡು ಕ್ರಮಜರುಗಿಸದಿದ್ದರೆ, **"ಸಮಿತಿಯ ವರದಿಯು ನೀರಿನಲ್ಲಿ ಬರೆದ ಜಲ ಲಿಪಿಯಾಗುತ್ತದೆ"**. ಆದುದರಿಂದ ಮೇಲ್ನೋಟಕ್ಕೆ ಎದ್ದುಕಾಣುವ ಪ್ರಕರಣಗಳಲ್ಲಿ ಸರ್ಕಾರವು ಕಠಿಣ ಕ್ರಮ ತೆಗೆದುಕೊಳ್ಳುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ.

ಎ.ಟಿ.ರಾಮಸ್ವಾಮಿ
ಅಧ್ಯಕ್ಷರು,
ಜಂಟಿ ಸದನ ಸಮಿತಿ

೦

ಡಿ'ಸೋಜಾ ರಾಬಿನ್ಸ್
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ವಿಧಾನ ಮಂಡಲ

* * * * *

ಅನುಬಂಧ-3

ಮಾನ್ಯ ಉಪ ಮುಖ್ಯ ಮಂತ್ರಿಗಳು. ದಿನಾಂಕ 30-08-2012ರಂದು 8/29/
ವರದಿಯಲ್ಲಿ ನಮೂದಿಸಿರುವ ಅಂಶಗಳ ಮೇಲೆ ತೆಗೆದುಕೊಂಡ
ಪರಿಹಾರಕ್ಕೆ ಕ್ರಮಗಳ ಬಗ್ಗೆ ಪರಿಶೀಲಿಸಿ

**ಬೆಂಗಳೂರು ಗ್ರಾ. ಜಿಲ್ಲೆಯಿಂದ (ಜಾಲಾ ಹೋಬಳಿ) ಬೆಂಗಳೂರು ಜಿಲ್ಲೆಗೆ ವರ್ಗಾವಣೆಗೊಂಡ "ಸೃಷ್ಟಿತ ಭೂ ಮಂಜೂರಾತಿ" ಪ್ರಕರಣಗಳ ತನಿಖೆ :**

- ದಿ : 01-08-1986ರಿಂದ ಅವಿಭಾಜ್ಯ ಬೆಂಗಳೂರು ಜಿಲ್ಲೆ ವಿಭಜನೆಯಾಗಿ ಬೆಂಗಳೂರು ಜಿಲ್ಲೆ (ನಗರ) ಮತ್ತು ಬೆಂ (ಗ್ರಾ) ಜಿಲ್ಲೆಗಳು ಅಸ್ತಿತ್ವಕ್ಕೆ ಬಂದಿರುತ್ತದೆ.
- ವಿಭಜನೆಯ ಸಮಯದಲ್ಲಿ ಹೊಸಕೋಟೆ ತಾಲ್ಲೂಕಿನ ಬಿದರಹಳ್ಳಿ ಹೋಬಳಿ, ದೇವನಹಳ್ಳಿ ತಾಲ್ಲೂಕಿನ ಜಾಲಾ ಹೋಬಳಿಗಳನ್ನು, ನೆಲಮಂಗಲ ತಾಲ್ಲೂಕಿನಿಂದ ದಾಸನಪುರ ಹೋಬಳಿಯನ್ನು ಮತ್ತು ಮಾಗಡಿ ತಾಲ್ಲೂಕಿನ ತಾವರೆಕೆರೆ ಹೋಬಳಿಯನ್ನು ಬೆಂಗಳೂರು ಜಿಲ್ಲೆಗೆ ಸೇರ್ಪಡೆ ಮಾಡಲಾಗಿರುತ್ತದೆ.
- 2007 ಮೇ ತಿಂಗಳು ಬೆಂ.ಗ್ರಾ. ಜಿಲ್ಲೆಯಿಂದ ಬೆಂ.ನಗರ ಜಿಲ್ಲೆಗೆ ಒಟ್ಟು 19,753 ಕಡತಗಳನ್ನು ವರ್ಗಾಯಿಸಲಾಗಿತ್ತು.

19

8/29/ 8/29/2012

- ಪರಿಶೀಲನೆಗೆ ಒಳಪಡಿಸಲಾದ ಪ್ರಕರಣಗಳಲ್ಲಿ ಸೃಷ್ಟಿತ ಅಕ್ರಮ ಭೂ ಮಂಜೂರಾತಿ ಪ್ರಕರಣಗಳು – **297**
- ಒಳಗೊಂಡಿರುವ ಒಟ್ಟು ಸರ್ವೆ ನಂಬರುಗಳು – **297**
- ಗ್ರಾಮಗಳ ಸಂಖ್ಯೆ – **122**
- ಅಕ್ರಮ ಭೂ ಮಂಜೂರಾತಿ ಪಡೆದವರ ಸಂಖ್ಯೆ – **1177**
- ಒಳಗೊಂಡಿರುವ ವಿಸ್ತೀರ್ಣ – **2306 ಎಕರೆ**

21

ಅನುಬಂಧ – 4

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಶಾಂತನಪುರ ಗ್ರಾಮದ ಸರ್ವೆ ನಂ.9ರಲ್ಲಿ 261.13 ಎಕರೆ ಸರ್ಕಾರಿ ಭೂಮಿಯನ್ನು ಸುಳ್ಳು ದಾಖಲೆ ಸೃಷ್ಟಿಸಿ ಬೋಗಸ್ ಸಾಗುವಳಿ ಚೀಟಿ ನೀಡಿರುವ ಬಗ್ಗೆ.

ಕಂಇ 319 ಎಲ್‌ಜಿಜಿ 2013

(10) ದಯವಿಟ್ಟು ಹಿಂದಿನ ಕಂಡಿಕೆಗಳನ್ನು ಅವಗಾಹಿಸುವುದು. ಬೆಂಗಳೂರು ಪ್ರಾದೇಶಿಕ ಆಯುಕ್ತರ ವರದಿಯಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಶಾಂತನಪುರ ಗ್ರಾಮದ ಸ.ನಂ.9ರಲ್ಲಿ 261.13 ಎಕರೆ ಜಮೀನಿನಲ್ಲಿ ಸುಳ್ಳು ದಾಖಲೆ ಸೃಷ್ಟಿಸಿ ಅಕ್ರಮವಾಗಿ ಖಾಸಗಿಯವರಿಗೆ ದರಖಾಸ್ತಿನಲ್ಲಿ ಮಂಜೂರು ಮಾಡಿರುವುದಲ್ಲದೆ, ಈ ಪೈಕಿ 46.12 ಎಕರೆ ಜಮೀನನ್ನು 1977-78ನೇ ಸಾಲಿನಲ್ಲಿ 12 ಜನರಿಗೆ ಮಂಜೂರಾಗಿದೆಯೆನ್ನುವ ರೀತಿಯಲ್ಲಿ ದಾಖಲೆಗಳಲ್ಲಿ ತೋರಿಸಿ ನಿಯಮ ಬಾಹಿರವಾಗಿ ಮಂಜೂರಾಗಿರುವುದು ದೃಢಪಟ್ಟಿದೆ. ಆದುದರಿಂದ, ಸದರಿ 46.12 ಎಕರೆ ಜಮೀನನ್ನೊಳಗೊಂಡಂತೆ ಸರ್ವೆ ನಂಬರ್ 9ರ ಒಟ್ಟು 261.13 ಎಕರೆ ಜಮೀನಿನ ಸ್ಥಳ ತನಿಖೆ ಮಾಡಿ, ಈ ಜಮೀನಿನಲ್ಲಿ ಹಾಲಿ ಸಾಗುವಳಿ ಮಾಡುತ್ತಿರುವವರು ಮಂಜೂರಾದಾರರೇ ಅಥವಾ ಅವರ ನ್ಯಾಯ ಸಮ್ಮತ ವಾರಸುದಾರರೇ ಎಂಬ ಬಗ್ಗೆ ವಿವರವಾದ ವರದಿಯೊಂದಿಗೆ, ಸಂಬಂಧಿಸಿದ ಅವಧಿಯಲ್ಲಿ ಭೂ ಮಂಜೂರಾತಿ ಮತ್ತು ಮ್ಯುಟೇಷನ್ ಕಡತಗಳನ್ನು ನಿರ್ವಹಿಸಿ, ಈ ನಿಯಮ ಬಾಹಿರ ಮಂಜೂರಾತಿಗೆ ಕಾರಣರಾದ ಈ ಕೆಳಕಂಡ ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಿ, ಆರೋಪ ಪಟ್ಟಿಯನ್ನು ಒಂದು ತಿಂಗಳೊಳಗೆ ಕಳುಹಿಸಿಕೊಡುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ನಿರ್ದೇಶನ ನೀಡಲು ಮಾನ್ಯ ಕಂದಾಯ ಸಚಿವರ ಆದೇಶ ಕೋರಿದೆ:-

ಖಾತೆ ಮಾಡಿದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಅಧಿಕಾರಿಗಳು

| ಕ್ರ. ಸಂ | ಹೆಸರು | ಹುದ್ದೆ | ಕರ್ತವ್ಯ ನಿರ್ವಹಿಸಿದ ಅವಧಿ |
|---|---|---|---|
| 1 | ದಯಾನಂದ ಭಂಡಾರಿ | ತಹಶೀಲ್ದಾರ್ | 04/08/2007 ರಿಂದ 21/07/2011ರವರೆಗೆ |
| 2 | ಜಿ.ಎ.ನಾರಾಯಣಸ್ವಾಮಿ | ಎಲ್‌ಎನ್‌ಡಿ. ಶಿರಸ್ತೇದಾರ್ (ಹಾಲಿ ಗ್ರೇಡ್-2 ತಹಶೀಲ್ದಾರ್) | 21/01/2009 ರಿಂದ 16/04/2013ರವರೆಗೆ. |
| 3 | ಹೆಚ್ ತಿಮ್ಮರಾಯಪ್ಪ | ಹಕ್ಕುದಾಖಲೆ ಶಿರಸ್ತೇದಾರ್ | 20/10/2008 ರಿಂದ ತಹಲ್‌ವರೆಗೆ |
| 4 | ಕೃಷ್ಣರಾವ್ | ಎಲ್‌ಎನ್‌ಡಿ. ವಿಷಯ ನಿರ್ವಾಹಕರು | 03/01/2011 ರಿಂದ ತಹಲ್‌ವರೆಗೆ |
| 5 | ಕೆ.ಶ್ರೀನಿವಾಸ | ರಾಜಸ್ವ ನಿರೀಕ್ಷಕರು | 07/03/2011 ರಿಂದ 19/02/2013ರವರೆಗೆ |
| 6 | ವಿ.ಚಿದಾನಂದ | ಗ್ರಾಮಲೆಕ್ಕಿಗರು, ಸೂಲಿಬೆಲೆ ವೃತ್ತ | 24/06/2005 ರಿಂದ 31/05/2012ರವರೆಗೆ |

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಶಾಂತನಪುರ ಗ್ರಾಮದ ಸರ್ವೆ ನಂ.9ರಲ್ಲಿ 261.13 ಎಕರೆ ಸರ್ಕಾರಿ ಭೂಮಿಯನ್ನು ಸುಳ್ಳು ದಾಖಲೆ ಸೃಷ್ಟಿಸಿ ಬೋಗಸ್ ಸಾಗುವಳಿ ಚೀಟಿ ನೀಡಿರುವ ಬಗ್ಗೆ.

ಕಂಇ 319 ಎಲ್‌ಜಿಬಿ 2013

**ಮೋಡಿ ಮಾಡಿದ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳು**

| ಕ್ರ.ಸಂ. | ಹೆಸರು | ಹುದ್ದೆ | ಕರ್ತವ್ಯ ನಿರ್ವಹಿಸಿದ ಅವಧಿ |
|---|---|---|---|
| 1 | ಬಿ.ಮಲ್ಲಿಕಾರ್ಜುನ | ತಹಶೀಲ್ದಾರ್ ಗ್ರೇಡ್ -1 | 21/11/2011 ರಿಂದ ತಹಲ್‌ವರೆಗೆ |
| 2 | ಜಿ.ಎ.ನಾರಾಯಣಸ್ವಾಮಿ | ತಹಶೀಲ್ದಾರ್ ಗ್ರೇಡ್-2 | 21/01/2009 ರಿಂದ 16/04/2013 ರವರೆಗೆ |
| 3 | ಹೆಚ್.ತಿಮ್ಮರಾಯಪ್ಪ | ಹಕ್ಕುದಾಖಲೆ ಶಿರಸ್ತೇದಾರ್ | 20/10/2008 ರಿಂದ ತಹಲ್‌ವರೆಗೆ |
| 4 | ಎಸ್.ರವಿ | ಅಭಿಲೇಖಾಲಯ, ವಿಷಯನಿರ್ವಾಹಕರು | 23/07/2001 ರಿಂದ ತಹಲ್‌ವರೆಗೆ |

(ಜಿ.ಲತಾ ಕೃಷ್ಣರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ

11) ಮಾನ್ಯ ಕಂದಾಯ ಸಚಿವರು)

RM/264
14.8.13

V. Sreenivasa Prasad
Minister for Revenue

12) ಪ್ರಧಾನ ಕಾರ್ಯದರ್ಶಿ)

PRS
28/8

13) ಅ)

28/8

(ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂ. ಇಲಾಖೆ (ಭೂ ಮಂಜೂರಾತಿ)

Received
01/09/13

ಅನುಬಂಧ -5

# ಕಲಂ 136(3) ಅಡಿಯಲ್ಲಿನ ಪ್ರಕರಣಗಳ ತಾಲ್ಲೂಕುವಾರು ಮಾಹಿತಿ

ವಿಸ್ತೀರ್ಣ ಎ-ಗು (ದಿನಾಂಕ: 29-08-2012ರಂತೆ)

| Sl.No | Taluk | Total Extent detected as on the date of interim report | Total Extent detected as on date | Total Disposed Extent | Disposed in favour of Govt. | Dropped Cases-Extent | Balance to be disposed Extent |
|---|---|---|---|---|---|---|---|
| 1 | B'lore North | 200-01 | 630-26 | 356-12 | 206-17 | 149-35 | 274-14 |
| 2 | North Adl | 4428-16 | 5776-27 | 2885-38 | 1163-19 | 1722-19 | 2890-29 |
| 3 | B'lore East | 261-20 | 654-23 | 494-23 | 306-22 | 188-01 | 160-00 |
| 4 | B'lore South | 483-05 | 483-25 | 332-39 | 201-27 | 131-12 | 150-26 |
| 5 | Anekal | 2961-12 | 3410-20 | 2628-24 | 1205-12 | 1423-12 | 781-36 |
| | **Total** | **8334-14** | **10956-01** | **6698-16** | **3083-17** | **3614-39** | **4257-25** |

ಅನುಬಂಧ-6

# ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಬೆಂಗಳೂರು ಜಿಲ್ಲೆ,
ಸರ್ಕಾರದ ಜಮೀನು ಖಾಸಗಿಯವರಿಗೆ
ಹಕ್ಕು ದಾಖಲೆ

# ಪರಿಶೀಲನಾ ವರದಿ

## ಸಂಪುಟ – ೧

ಪ್ರಾದೇಶಿಕ ಆಯುಕ್ತರು
ಬೆಂಗಳೂರು ವಿಭಾಗ

## ಪೀಠಿಕೆ

ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆಯು, ದಿನಾಂಕ: 15.12.2010 ರಂದು ನಡೆಸಿದ ಸಭೆಯಲ್ಲಿ, ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆಯವರು, 428 ಪ್ರಕರಣಗಳಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 136(3) ಅನ್ವಯ, ಆದೇಶ ಹೊರಡಿಸುವ ಸಮಯದಲ್ಲಿ, ಮಂಜೂರಾತಿ ಕುರಿತಂತೆ ಮೂಲ ವಹಿಗಳನ್ನು ಪರಿಶೀಲಿಸಿ ಆದೇಶ ಹೊರಡಿಸಿರುವ ಬಗ್ಗೆ ಸ್ಪಷ್ಟವಾಗಿ ತಿಳಿಸಿಲ್ಲವಾದ್ದರಿಂದ, ಹಾಗೂ ಈ ಎಲ್ಲಾ ಪ್ರಕರಣಗಳಲ್ಲಿ ಸರ್ಕಾರದ ಹಿತಾಸಕ್ತಿ ಒಳಗೊಂಡಿರುವುದರಿಂದ ಈ ಎಲ್ಲಾ ಪ್ರಕರಣಗಳನ್ನು ಮತ್ತೊಮ್ಮೆ ಪರಿಶೀಲನೆ ಮಾಡಬೇಕಾಗಿರುತ್ತದೆಯೆಂದು ನಿರ್ಣಯಿಸಿದೆ. ಸರ್ಕಾರದ ವಿರುದ್ಧವಾಗಿ ಆದೇಶವಾಗಿರುವ ಪ್ರಕರಣಗಳಲ್ಲಿ, " ಮೂಲ ದರಖಾಸ್ತು ರಿಜಿಸ್ಟರ್ ", " ಮೂಲ ಸಾಗುವಳಿ ರಿಜಿಸ್ಟರ್ ", " ಮೂಲ ಕಿಮ್ಮತ್ತು ಕಟ್ಟಿರುವ ಬಗ್ಗೆ ಚಲನ್ ಹೋಲಿಸುವ ರಿಜಿಸ್ಟರ್." ಇವುಗಳೊಡನೆ ಪರಿಶೀಲಿಸಿ, 428 ಪ್ರಕರಣಗಳಲ್ಲಿ ಆಗಿರುವ ಆದೇಶಗಳಲ್ಲಿ, ಉಲ್ಲೇಖಿಸಿರುವ ಜಮೀನು ಸರ್ಕಾರಿ ಜಮೀನೇ ಎಂಬುದನ್ನು ಖಾತ್ರಿ ಪಡೆದುಕೊಳ್ಳುವಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಇವರನ್ನು ಕೋರಲಾಗಿದೆ. ಸದರಿ ನಿರ್ಣಯವನ್ನು ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು, ದಿ:21.12.2010ರ ಪತ್ರದಲ್ಲಿ ತಿಳಿಸಿರುತ್ತಾರೆ. ಅಂತೆಯೇ, " ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ " ತೆಗೆದುಕೊಂಡ ನಿರ್ಣಯದಂತೆ ಪರಿಶೀಲಿಸಿ ವರದಿಯನ್ನು ಈ ಹೊತ್ತಿಗೆಯಲ್ಲಿ ಇಡಲಾಗಿದೆ.

ವಿಶೇಷ ಜಿಲ್ಲಾಧಿಕಾರಿಗಳವರ ಮುಂದೆ ಕಲಂ 136(3) ಅಡಿ ಪರಿಷ್ಕೃತ ಆದೇಶ ಕೋರಿ ದಾಖಲು ಪಡಿಸಲಾದ, 428 ಪ್ರಕರಣಗಳ ಪೈಕಿ ಹೊಸಹಳ್ಳಿಗೆ ಸಂಬಂಧಿಸಿದಂತೆ 47 ಪ್ರಕರಣಗಳಿಗೆ ಈಗಾಗಲೇ ವರದಿಯನ್ನು ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆಯ ಅಧ್ಯಕ್ಷರಿಗೆ ಸಲ್ಲಿಸಿದೆ. ಅಧ್ಯಕ್ಷರು ಪರಿಶೀಲಿಸಲು ಸೂಚಿಸಿದ 428 ಕಡತ ಗಳ ಪೈಕಿ, 6 ಕಡತ ಗಳನ್ನು ವಿಶೇಷ ಜಿಲ್ಲಾಧಿಕಾರಿ ಕಛೇರಿಯು ನೀಡಿರುವುದಿಲ್ಲ, ಬದಲಾಗಿ 7 ಬೇರೆ ಕಡತ ಗಳನ್ನು ನೀಡಿವೆ. ಒಟ್ಟಾರೆ ಸ್ವೀಕರಿಸಿದ 382 ಪ್ರಕರಣಗಳನ್ನು ಪರಿಶೀಲಿಸಿ ವರದಿಯನ್ನು ನೀಡಲಾಗುತ್ತಿದೆ.

382 ಪ್ರಕರಣಗಳನ್ನು ಪರಿಶೀಲಿಸಲು 30 ಶಿರಸ್ತೇದಾರ್ ಮತ್ತು ಶಿರಸ್ತೇದಾರ್ ವೃಂದದ ಕಂದಾಯ ಲೆಕ್ಕಪರಿಶೋಧಕರುಗಳನ್ನು ಒಳಗೊಂಡ, 15 ತಂಡಗಳನ್ನು ರಚಿಸಲಾಗಿದೆ. 5 ತಂಡಗಳಿಗೆ ಒಬ್ಬರಂತೆ ಮೂವರು ತಹಶೀಲ್ದಾರ್‌ಗಳು ಮೇಲ್ವಿಚಾರಣೆ ಕಾರ್ಯನಿರ್ವಹಿಸಿರುತ್ತಾರೆ.

ಬೆಂಗಳೂರು ನಗರ ಜಿಲ್ಲೆಯ 5 ತಾಲ್ಲೂಕು ಕಚೇರಿಗಳಿಂದ ಲಭ್ಯವಿರುವ ಮೂಲ ದರಖಾಸ್ತು ವಹಿ, ಮೂಲ ಸಾಗುವಳಿ ಚೀಟಿ ರಿಜಿಸ್ಟರ್, ಮೂಲ ಕಿಮ್ಮತ್ತು ಕಟ್ಟಲಾಗಿರುವ ಬಗ್ಗೆ ಚಲನ್ ಹೋಲಿಸುವ ರಿಜಿಸ್ಟರ್, ದರಖಾಸ್ತು ವಹಿ, ಮೂಲ ಐಎಲ್ ಮತ್ತು ಆರ್‌ಆರ್ ವಹಿ, ಮೂಲ ಮ್ಯುಟೇಷನ್ ವಹಿ ಮತ್ತು ಮೂಲ ಪಹಣಿ ವಹಿಯನ್ನು ಪಡೆದುಕೊಳ್ಳಲಾಗಿದೆ. ಲಭ್ಯವಿಲ್ಲದ ವಹಿಗಳ ಬಗ್ಗೆ ತಹಶೀಲ್ದಾರ್‌ರಿಂದ ದೃಢೀಕರಣ ಪಡೆಯಲಾಗಿದೆ. ಕೆಲವು ಪ್ರಕರಣ ಕುರಿತಂತೆ ಕೆಲವು ಕಡತಗಳು ಲಭ್ಯವಿಲ್ಲದಿದ್ದಾಗ್ಯೂ, ಲಭ್ಯವಿರುವ ಮೂಲ ದಾಖಲೆಗಳ ಆಧಾರದ ಮೇಲೆ ತಾರ್ಕಿಕವಾಗಿ ನಿರ್ಣಯಕ್ಕೆ ಬರಲಾಗಿದೆ. ವಾದದ ಸಮಯದಲ್ಲಿ, ವಿಶೇಷ ಜಿಲ್ಲಾಧಿಕಾರಿಗಳ ಸಮಕ್ಷಮ ಪ್ರತಿವಾದಿಗಳು ಹಾಜರುಪಡಿಸಲಾದ ಜೆರಾಕ್ಸ್ ಪ್ರತಿಯ ದಾಖಲೆಗಳನ್ನು ತಂಡಗಳು ಪರಿಶೀಲಿಸಿರುತ್ತವೆ.

ಪ್ರತಿಯೊಂದು ಪ್ರಕರಣದಲ್ಲಿ, ಮೂಲ ರಿಜಿಸ್ಟರ್‌ಗಳು, ಲಿಖಿತ ಹೇಳಿಕೆಗಳು ಮತ್ತು ಪ್ರತಿವಾದಿಗಳು ಹಾಜರುಪಡಿಸಲಾದ ದಾಖಲೆಗಳು ಅಧಿನಿಯಮಗಳ ಮತ್ತು ನಿಯಮಗಳ ಬೆಳಕಿನಲ್ಲಿ ಪರಿಶೀಲನೆ ನಡೆಸಿ ವರದಿಯನ್ನು ತಯಾರಿಸಲಾಗಿದೆ. ಎಲ್ಲಾ 382 ಪ್ರಕರಣಗಳಲ್ಲಿ ಚರ್ಚಿತವಾದ 952-00 ಎಕರೆ ಜಮೀನು ಸರ್ಕಾರದ ಪರವಾಗಿರುವ ಜಮೀನೆಂದು ತೀರ್ಮಾನಿಸಲಾಗಿದೆ. ಆದಾಗ್ಯೂ, ಈ ಜಮೀನಿಗೆ ಖಾಸಗಿಯವರಿಗೆ ಹಕ್ಕು ದಾಖಲೆ ಮಾಡುವಂತೆ ವಿಶೇಷ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿರುತ್ತಾರೆ. ಹೀಗಾಗಿ ವಿಶೇಷ ಜಿಲ್ಲಾಧಿಕಾರಿಗಳು ಹೊರಡಿಸಿರುವ ಪರಿಷ್ಕೃತ ಆದೇಶಗಳು ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿದೆ ಹಾಗೂ ದೋಷಪೂರ್ಣವಾಗಿದೆ.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 136(3)ರನ್ವಯ, ಪ್ರಕರಣವನ್ನು ಸಂಬಂಧಪಟ್ಟ ತಹಶೀಲ್ದಾರ್ ಅವರ ವರದಿಯ ಮೇಲೆ, ದಾಖಲಿಸಿಕೊಂಡಿರುತ್ತಾರೆ. ಕಲಂ 136(3) ಕೆಳಗಿನಂತಿದೆ.

" The Deputy Commissioner may, on his own motion or on application of a party call for and examine any records made under Sec.127 and Sec.129 and pass such orders as he may deem fit; "

" Provided that no order shall be passed except after hearing the party would be adversely affected by such order; "

ಕರ್ನಾಟಕ ಭೂ ಕಂದಾಯ ಅಧಿನಿಯಮದ 1964ರ ಕಲಂ 130, ಹಕ್ಕು ಪ್ರತಿಪಾದಿಸುವ ವ್ಯಕ್ತಿಯು, ಹಕ್ಕನ್ನು ಪ್ರತಿಪಾದಿಸಲು ಮೂಲ ದಾಖಲಾತಿಗಳನ್ನು ವಿಚಾರಣಾಧಿಕಾರಿಗಳ ಮುಂದೆ ಹಾಜರುಪಡಿಸಲು ಭಾದ್ಯನಾಗಿರುತ್ತಾನೆ ಎಂದು ತಿಳಿಸುತ್ತದೆ. ಸದರಿ ನಿಯಮವನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯವು ಎತ್ತಿ ಹಿಡಿದಿದೆ.

ಗೌರವಯುತ ಕರ್ನಾಟಕ ಉಚ್ಚ ನ್ಯಾಯಾಲಯವು ದಿ:20.8.2010ರಂದು WP ಸಂ:3069/2008ರಲ್ಲಿ ಆದೇಶ ನೀಡಿದ್ದು, ಪ್ರಧಾನ ತತ್ವ & ನಿಯಮಗಳು ಕೆಳಗಿನಂತಿವೆ:

1. ಜಿಲ್ಲಾಧಿಕಾರಿಗಳು 136(3)ರಡಿಯಲ್ಲಿ ಸ್ವಪ್ರೇರಣೆಯಿಂದ ಅಥವಾ ದಿನಪತ್ರಿಕೆಗಳ ವರದಿಯ ಮೇಲೆ ಅಥವಾ ತಹಶೀಲ್ದಾರರಿಂದ ಸ್ವೀಕೃತಗೊಂಡ ವರದಿಯ ಆಧಾರದ ಮೇಲೆ ನೋಟೀಸನ್ನು ನೀಡಬಹುದು.

2. ತಾಲ್ಲೂಕು ಕಚೇರಿಯಲ್ಲಿ ಮೂಲ ದಾಖಲಾತಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ತನ್ನ ಹಕ್ಕನ್ನು ಪ್ರತಿವಾದಿಸಲು ಹಕ್ಕು ಪ್ರತಿಪಾದಿಸುವ ವ್ಯಕ್ತಿಯು ಮೂಲ ಮಂಜೂರಾದ ಆದೇಶಗಳನ್ನು ಹಾಜರು ಪಡಿಸಲು ಬದ್ಧನಾಗಿರುತ್ತಾನೆ.

ಈ ಪ್ರಕರಣಗಳಲ್ಲಿ ತಹಶೀಲ್ದಾರರು ಚರ್ಚಿತ ಜಮೀನು ಸರ್ಕಾರದ ಜಮೀನಾಗಿದ್ದು, ಹಕ್ಕು ದಾಖಲೆ ಕೋರಿ ಸಲ್ಲಿಸಿರುವ ಅರ್ಜಿಯು ನೈಜವಾದದ್ದಲ್ಲವೆಂದು ತಿಳಿಸಿ ವರದಿ ಮಾಡಿರುತ್ತಾರೆ. ಅಂತೆಯೇ, ವಿಶೇಷ ಜಿಲ್ಲಾಧಿಕಾರಿಗಳು ಕಲಂ 136(3)ರನ್ವಯ ನೋಟೀಸ್ ನೀಡಿರುತ್ತಾರೆ. ವಿಶೇಷ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸುವ ಮುನ್ನ ಹಕ್ಕು ಕೋರುವ ವ್ಯಕ್ತಿ ಹಕ್ಕು ಕೋರುವ ಜಮೀನಿನ " ಮಂಜೂರು ಆಗಿದೆಯೇ " ಎಂಬ ಬಗ್ಗೆ ಯಾವ ದಾಖಲೆಯನ್ನು ಪರಿಶೀಲಿಸದೆ ನಿರ್ಧಾರವನ್ನು ಕೈಗೊಂಡಿರುತ್ತಾರೆ. ಹಾಗೆಯೇ, ಕಲಂ 130ರನ್ವಯ ಹಕ್ಕು ಕೋರಿದ ವ್ಯಕ್ತಿಯು ಭೂ ಮಂಜೂರಾತಿ ಆದೇಶ ಕುರಿತಂತೆ ದಾಖಲೆ ಹಾಜರುಪಡಿಸದೇ ಇದ್ದರೂ, ಕೇವಲ ಹಕ್ಕು ಪ್ರತಿಪಾದಿಸದ ಹಾಗೂ ಪ್ರಾಮುಖ್ಯವಲ್ಲದ, ದಸ್ತಾವೇಜುಗಳ ನಕಲುಗಳ ಮೇಲೆ ಆದೇಶ ನೀಡಿರುತ್ತಾರೆ. ಹೀಗಾಗಿ, ಅವರ ಆದೇಶ ಕಾನೂನಿನ ದೃಷ್ಟಿಯಲ್ಲಿ ದೋಷಪೂರಿತವಾಗಿದೆ.

382 ಪ್ರಕರಣಗಳ ಪೈಕಿ 176 ಪ್ರಕರಣಗಳು, ಅಕ್ರಮ ಸಾಗುವಳಿಯನ್ನು ಸಕ್ರಮೀಕರಣಗೊಳಿಸುವ ಸಂಬಂಧ ಇದ್ದು, ಪ್ರಕ್ರಿಯೆಯೇ ದೋಷಪೂರ್ಣವಾಗಿದ್ದು, ಕಾನೂನು ಸಮ್ಮತವಾಗಿರುವುದಿಲ್ಲ. ಕಾನೂನಿನ ದೃಷ್ಟಿಯಲ್ಲಿ ತಪ್ಪಾಗಿರುವ ಪ್ರಕ್ರಿಯೆಯ ಅನ್ವಯ ನೀಡಲಾದ ಸಾಗುವಳಿ ಚೀಟಿಯ ಜೆರಾಕ್ಸ್ ಪ್ರತಿಯನ್ನು ಆಧಾರವಾಗಿ ಇಟ್ಟುಕೊಂಡು ಖಾಸಗಿ ವ್ಯಕ್ತಿಗಳಿಗೆ ಭೂಮಂಜೂರಾತಿ ಆಗಿದೆ ಎಂದು ನಿರ್ಣಯಿಸಿ, ಪಹಣಿ ಪಹಿಯಲ್ಲಿ ಅವರ ಹೆಸರು ಮುಂದುವರೆಯುವಂತೆ ಆದೇಶಿಸಲಾಗಿದೆ.

61 ಪ್ರಕರಣಗಳು `ಇನಾಂ ರದ್ದಿಯಾತಿ` ವಿಷಯಕ್ಕೆ ಸಂಬಂಧಪಟ್ಟಿವೆ. ಮೈಸೂರು (ವೈಕ್ತಿ ಮತ್ತು ಸಂಕೀರ್ಣ) ಇನಾಂ ರದ್ದಿಯಾತಿ ಕಾಯ್ದೆ 1954 ಕಲಂ 3ರ ಅನ್ವಯ. ಇನಾಂ ರದ್ದಿಯಾತಿಯ ನಂತರ, ಎಲ್ಲಾ ಇನಾಂ ಭೂಮಿಯು ಸರ್ಕಾರದಲ್ಲಿ ವಿಹಿತವಾಗಿದ್ದು, ನಂತರ ಕಲಂ 4, 5 ಮತ್ತು 6 ಅನ್ವಯ, ಅರ್ಹತೆ ಉಳ್ಳವರಿಗೆ ಭೂಮಿ ಪುನರ್ ಮಂಜೂರಾತಿ ಆಗಿದೆ. ಈ ಸಮಯದಲ್ಲಿ ಅನರ್ಹರಿಗೂ ಮಂಜೂರಾಗಿರುವುದಾಗಿ ದಾಖಲೆಗಳು ಸೃಷ್ಠಿಯಾಗಿವೆ. ಪುನರ್ ಮಂಜೂರಾತಿಯ ನಂತರ ಸರ್ಕಾರದ ವಶದಲ್ಲಿ ಉಳಿಯುವ ಜಮೀನಿಗೆ, ಕೆಲವು ಖಾಸಗಿ ವ್ಯಕ್ತಿಗಳು ದಾಖಲೆಗಳನ್ನು ಕೃತಿಮವಾಗಿ ಸೃಷ್ಠಿಸಿ, ಹಕ್ಕು ಪ್ರತಿಪಾದಿಸುವ ಪ್ರಯತ್ನ ನಡೆದಿದೆ.

ಉಳಿದ 145 ಪ್ರಕರಣಗಳು " ಭೂ ಮಂಜೂರಾತಿ " ವಿಷಯಕ್ಕೆ ಸಂಬಂಧಪಟ್ಟಿವೆ. ಇವುಗಳಲ್ಲಿ ಸರ್ಕಾರಿ ಜಮೀನಾದ " ಗೋಮಾಳ " ಜಮೀನನ್ನು ಮಂಜೂರು ಮಾಡಿದೆ ಎಂದು ದಾಖಲೆಗಳನ್ನು ಸೃಷ್ಠಿಸಿರುವುದು ಕಾಣುತ್ತದೆ. ಕಾಲಾನುಕ್ರಮವಾಗಿ ಇರಬೇಕಾದ ದಾಖಲೆಗಳಾದ ಭೂ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವಿಕೆ, ದರಖಾಸ್ತು ವಹಿ, ಗೋಮಾಳ ಜಮೀನಿನಿಂದ ಕಳೆದು ಕೃಷಿ ಉದ್ದೇಶಕ್ಕೆ ಮಂಜೂರಾತಿಗಾಗಿ ಮೀಸಲಿಡುವ ಆದೇಶ, ಮಂಜೂರಾತಿ ನಡವಳಿ, ಮಂಜೂರಾತಿ ಅಧಿಕೃತ ಜ್ಞಾಪನ, ಕಿಮ್ಮತ್ತು ಕಟ್ಟಿರುವ ಚಲನ್ ವಹಿ, ಸಾಗುವಳಿ ಚೀಟಿ ವಿತರಣಾ ವಹಿ, ಸಾಗುವಳಿ ಚೀಟಿ ಕಛೇರಿ ಪ್ರತಿ, ಸಂಬಂಧಪಟ್ಟ ಮ್ಯುಟೇಷನ್ ವಹಿ ಹಾಗೂ ದೃಢೀಕರಣ ಮತ್ತು ಪಹಣಿ ವಹಿಯಲ್ಲಿ ದಾಖಲೆ, ಇವುಗಳ ಪೈಕಿ ಒಂದೆರಡು ದಾಖಲೆಗಳಲ್ಲಿ ಹೆಸರು ಸೇರಿಸಿ, ಹಕ್ಕು ಕೋರಿದ " ಕೃತ್ರಿಮ ಮಂಜೂರಾತಿ " ಪ್ರಕರಣಗಳಾಗಿವೆ. ಇದಾವುದನ್ನೂ ವಿಚಾರಣೆ ಸಮಯದಲ್ಲಿ ಆಳವಾಗಿ ಪರಿಶೀಲಿಸಿಲ್ಲ. ಕಾಲಾನುಕ್ರಮವಾಗಿ ನಿರ್ವಹಿಸಬೇಕಾಗಿರುವ 12 ಅಧಿಕೃತ ದಾಖಲೆಗಳಲ್ಲಿ ಒಂದರೆಡು ದಾಖಲೆಗಳಲ್ಲಿ ಅನುಮಾನಾಸ್ಪದವಾಗಿ ಸೇರಿಸಿದ, ಮಂಡಿಸಿದ ದಾಖಲೆಗಳ ಆಧರಿಸಿ ಲಿಖಿತವಾದ ಮತ್ತು ಜೆರಾಕ್ಸ್ ಪ್ರತಿಗಳು, ಹಕ್ಕನ್ನು ಪ್ರತಿಪಾದಿಸುವುದಿಲ್ಲ.

ಆದಾಗಿ ಈ ಹೊತ್ತಿಗೆಯಲ್ಲಿರಿಸಲಾದ ಎಲ್ಲಾ 382 ಪ್ರಕರಣಗಳಲ್ಲಿ ವಿಶೇಷ ಜಿಲ್ಲಾಧಿಕಾರಿಗಳು ಸರ್ಕಾರದ ಜಮೀನನ್ನು ಖಾಸಗಿ ವ್ಯಕ್ತಿಗಳ ಹೆಸರಿಗೆ ದಾಖಲೆಗಳನ್ನು ಮುಂದುವರಿಸಲು ಆದೇಶಿಸಿ ತಪ್ಪು ನಿರ್ಣಯ ಕೈಗೊಂಡಿರುತ್ತಾರೆ.

(ಕೆ.ಎಸ್.ಪ್ರಭಾಕರ)
ಪ್ರಾದೇಶಿಕ ಆಯುಕ್ತರು,
ಬೆಂಗಳೂರು ವಿಭಾಗ

ಅನುಬಂಧ-7

**ಬಿನ್ನಮಂಗಲ ಮನವರ್ತೆ ಕಾವಲ್, ಬೈಯಪ್ಪನಹಳ್ಳಿಯಲ್ಲಿ ಪೂರ್ವಾಂಕರ ಬಿಲ್ಡರ್ಸ್ ನೋಂದಣಿ ಇಲಾಖೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳ ಶಾಮೀಲಿನಿಂದ ಸಾರ್ವಜನಿಕ ರಸ್ತೆ ಒತ್ತುವರಿ ಮಾಡಿರುವುದು**

- ➢ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಬಿನ್ನಮಂಗಲ ಮನವಾರ್ತೆ ಕಾವಲ್ ಸ.ನಂ.4/1 ರಲ್ಲಿ 8–08 ಎಕರೆ ಇರುತ್ತದೆ.
- ➢ ಸದರಿ ಜಮೀನನ್ನು ಭೂ ಪರಿವರ್ತನೆ ಮಾಡಿಸಿದ್ದು, ಒಟ್ಟು 47 ನಿವೇಶನಗಳಿಗೆ ಮತ್ತು ರಸ್ತೆಗಳಿಗೆ ಸಂಬಂಧಪಟ್ಟ 4 ಶುದ್ಧ ಕ್ರಯ ಪತ್ರಗಳನ್ನು ಅಂದರೆ ಒಟ್ಟು 51 ಕ್ರಯ ಪತ್ರಗಳನ್ನು ಬರೆಸಿಕೊಂಡಿರುತ್ತಾರೆ. ತದನಂತರ ಬಿ.ಎಂ.ಪಿ.ಯಲ್ಲಿ ಕ್ರೋಢೀಕೃತ ಖಾತೆ ಮಾಡಿಸಿಕೊಂಡಿರುತ್ತಾರೆ.
- ➢ ರಸ್ತೆಗೆ ಸಂಬಂಧಪಟ್ಟ ನಾಲ್ಕು ಕ್ರಯ ಪತ್ರಗಳಲ್ಲಿನ ವಿಸ್ತೀರ್ಣ 39,910 ಚದರ ಅಡಿ ಒಳಗೊಂಡಿರುತ್ತದೆ.

ಮುಂದುವರೆದಿದೆ:

- ➢ ಬಿಡಿಎಯಿಂದ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಭೂ ಉಪಯೋಗ ಬದಲಾವಣೆ ಆದೇಶ ಪಡೆದುಕೊಂಡಿರುತ್ತಾರೆ.
- ➢ ತದನಂತರ ಬಿಎಂಪಿಯಿಂದ ಪರಿಷ್ಕೃತ ಯೋಜನೆಗೆ ಅನುಮತಿ ಪಡೆದುಕೊಂಡಿರುತ್ತಾರೆ.
- ➢ ಮೆ: ಪೂರ್ವಾಂಕರ ಲಿಮಿಟೆಡ್ ರವರು ಅಭಿವೃದ್ಧಿಗಾಗಿ ಒಪ್ಪಂದ ಮಾಡಿಕೊಂಡ ಹಿನ್ನೆಲೆಯಲ್ಲಿ, ಬಹುಮಹಡಿ ಕಟ್ಟಡ ನಿರ್ಮಾಣ ಮುಂದುವರೆದಿರುತ್ತದೆ. ನಂತರ ಮೆ: ಪೂರ್ವಾಂಕರ ಲಿ., ರವರಿಗೆ ಕ್ರಯವಾಗಿರುತ್ತದೆ.
- ➢ ರಸ್ತೆಗಳಿಗೆ ಸಂಬಂಧಪಟ್ಟ 4 ಕ್ರಯ ಪತ್ರಗಳನ್ನು ನೋಂದಣಿ ಮಾಡಿದ ಸಬ್ ರಿಜಿಸ್ಟ್ರಾರ್, ಜಂಟಿ ಕ್ರಯದಾರರು ರಕ್ತ ಸಂಬಂಧಿಗಳಲ್ಲದೇ ಇದ್ದಾಗ್ಯೂ ಕ್ರೋಢೀಕೃತ ಖಾತೆ ಮಾಡಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವುದು ಅವಶ್ಯವಿದೆ.

ಮುಂದುವರೆದಿದೆ:

ಅನುಬಂಧ-೮.

## ಬೈರಸಂದ್ರ ಕೆರೆ ಅಂಗಳವನ್ನೇ ಬ್ಯಾಂಕಿನಲ್ಲಿ ಒತ್ತೆಯಿಟ್ಟು ಸಾಲ ಪಡೆದಿರುವ ಬಗ್ಗೆ;

- ➢ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಬೈರಸಂದ್ರ ಗ್ರಾಮದ ಸ.ನಂ.56ರ ಕೆರೆ ಜಮೀನಾಗಿದ್ದು, 15-11 ಎಕರೆ ವಿಸ್ತೀರ್ಣ ಹೊಂದಿರುತ್ತದೆ.
- ➢ ಈ ಪ್ರಕರಣದಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಕೆರೆ ಅಂಗಳದ ಜಮೀನನ್ನು ಒತ್ತೆ ಇಟ್ಟು ಶಿಯೂರಾ ಪ್ರಾಪರ್ಟಿ ಡೆವಲಪರ್ಸ್ ರವರು ಇಂಡಿಯನ್ ಓವರ್‌ಸೀಸ್ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾರೆ.
- ➢ ಸದರಿ ಕೆರೆಯನ್ನು ಅರಣ್ಯ ಇಲಾಖೆಗೆ ನೆಡತೋಪು ಮಾಡಲು ಹಸ್ತಾಂತರಿಸಿದಾಗ್ಯೂ ಮಹಾನಗರ ಪಾಲಿಕೆಯಿಂದ 1 ಕೋಟಿ 20 ಲಕ್ಷ ರೂ. ಖರ್ಚು ಮಾಡಲಾಗಿದೆ. ಸಾಲ ವಸೂಲಾತಿಗಾಗಿ ಸದರಿ ಜಮೀನನ್ನು ಇಂಡಿಯನ್ ಓವರ್‌ಸೀಸ್ ಬ್ಯಾಂಕಿನಿಂದ ಹರಾಜು ಮಾಡಲಾಗಿದ್ದು ರೂ.6.70 ಕೋಟಿಗೆ ಹರಾಜಾಗಿರುತ್ತದೆ.

ಮುಂದುವರೆದಿದೆ;

- ➢ ಹರಾಜು ಸ್ಥಿರೀಕರಿಸದಿರಲು ರಿಸರ್ವ್ ಬ್ಯಾಂಕ್ ನೌಕರರ ವಸತಿದಾರರ ಕ್ಷೇಮಾಭಿವೃದ್ಧಿ ಸಂಘ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಂಖ್ಯೆ: 4293/2005 ಸಲ್ಲಿಸಿರುತ್ತಾರೆ.
- ➢ ಅನಾವಶ್ಯಕವಾಗಿ ಹಣ ಖರ್ಚು ಮಾಡಿರುವ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಅರಣ್ಯ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಸಮಿತಿ ಅಭಿಪ್ರಾಯಪಟ್ಟಿರುತ್ತದೆ.

ಮುಂದುವರೆದಿದೆ;

ಅನುಬಂಧ – 9

ಮೊಬೈಲ್ ನಂ: 94481 20305

# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

ನಂ.759, 8ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, 2ನೇ ಬ್ಲಾಕ್, ಆರ್.ಟಿ.ನಗರ, ಬೆಂಗಳೂರು – 560 032.

ರವರಿಗೆ,

ದಿನಾಂಕ: 26.08.2014

ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ರವರು,
ಮಾನ್ಯ ಮುಖ್ಯಮಂತ್ರಿಗಳು,
ವಿಧಾನಸೌಧ, ಕರ್ನಾಟಕ ಸರ್ಕಾರ,
ಬೆಂಗಳೂರು.

ಮಾನ್ಯರೇ,

**ವಿಷಯ: ಸರ್ಕಾರಿ ಜಮೀನಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಕ್ಕು ಸ್ಥಾಪಿಸಿಕೊಂಡಿರುವ ಬಗ್ಗೆ.**

ಸರ್ಕಾರಿ ಭೂಮಿಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಹಕ್ಕುಗಳನ್ನು ಸ್ಥಾಪಿಸಿಕೊಂಡಿರುವ ವಿಷಯ ತಮಗೂ ತಿಳಿದಿರುತ್ತದೆ. ಬೆಂಗಳೂರು ನಗರ/ ನಗರ ಜಿಲ್ಲೆಯೊಂದರಲ್ಲಿಯೇ ಸುಮಾರು 20 ಸಾವಿರ ಎಕರೆಗಳಷ್ಟು ಸರ್ಕಾರಿ ಜಮೀನಿಗೆ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಕಬಳಿಸಿರುವುದು ತಿಳಿದಿರುತ್ತದೆ. ಇನ್ನು ಇಡೀ ರಾಜ್ಯದಲ್ಲಿ ಸರ್ಕಾರಿ ಜಮೀನಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಕ್ಕು ಸ್ಥಾಪಿಸಿಕೊಂಡಿರುವ ವಿಸ್ತೀರ್ಣವು ಸುಮಾರು 3–4 ಲಕ್ಷ ಎಕರೆಗಳಷ್ಟು ಇರುತ್ತದೆ. ಇಂತಹ ನಕಲಿ ದಾಖಲೆಗಳ ಸೃಷ್ಟಿಯನ್ನು ಖಂಡಿತವಾಗಿಯೂ ಬಡವರು, ರೈತರು ಮತ್ತು ಅಮಾಯಕರು ಮಾಡಿರುವುದಿಲ್ಲ. ಬದಲಿಗೆ ಇಂತಹ ನಕಲಿ ದಾಖಲೆಗಳ ಮೂಲಕ ಭೂ ಕಬಳಿಕೆ ಮಾಡಿರುವವರು ಅತ್ಯಂತ ಬಲಾಢ್ಯರು ಮತ್ತು ಪ್ರಭಾವಶಾಲಿಗಳೇ ಆಗಿರುತ್ತಾರೆ. ನಕಲಿ ದಾಖಲೆಗಳ ಸೃಷ್ಟಿಯು ಅಧಿಕಾರಿ/ ನೌಕರರ ಶಾಮೀಲಿನಿಂದಲೆ ನಡೆದಿರುತ್ತದೆ. ಇದುವರೆವಿಗೂ ಅಂಥವರ ಮೇಲೆ ಯಾವುದೇ ಶಿಕ್ಷೆ ಆಗದೆ ಸಣ್ಣಪುಟ್ಟ ಬಡ ಒತ್ತುವರಿದಾರರ ಮೇಲೆ ಕ್ರಮ ಕೈಗೊಂಡು **"ಬಡವರಿಗೆ ಶಿಕ್ಷೆ ಬಲಾಢ್ಯರಿಗೆ ರಕ್ಷಣೆ"** ಒದಗಿಸಿದಂತಾಗಿರುತ್ತದೆ. ನಕಲಿ ದಾಖಲೆ ಸೃಷ್ಟಿಯು ಒಂದು ಕೆಟ್ಟ ಪಿಡುಗಾಗಿದ್ದು ಅದರ ಮೇಲೆ ಕ್ರಮ ಕೈಗೊಳ್ಳದಿರುವುದು ಕೆಟ್ಟ ಮತ್ತು ಭ್ರಷ್ಟ ಆಡಳಿತದ ನಿದರ್ಶನವಾಗಿರುತ್ತದೆ.

ಮೇಲ್ಕಂಡ ವಿಷಯವು ಸರ್ಕಾರಕ್ಕೆ ಮತ್ತು ಸಮಾಜಕ್ಕೆ ಒಂದು ದೊಡ್ಡ ಸವಾಲೇ ಆಗಿರುವುದರಿಂದ ಈ ಕೆಳಕಂಡ ಕ್ರಮಗಳನ್ನು ಜರುಗಿಸುವುದರ ಮೂಲಕ ಸಾರ್ವಜನಿಕರ ಆಸ್ತಿಯನ್ನು ರಕ್ಷಿಸಬೇಕೆಂದು ಮತ್ತು ಭೂ ಕಬಳಿಕೆದಾರರ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕೆಂದು ಒತ್ತಾಯಪೂರ್ವಕವಾಗಿ ವಿನಂತಿಸುತ್ತೇವೆ.

ಪುಟ...2

- ಕರ್ನಾಟಕ ಭೂ ಕಬಳಿಕೆ (ನಿಷೇದ) ವಿದೇಯಕ:- 2007 ನ್ನು ಜಾರಿಗೆ ತಂದು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದು.

- ಕರ್ನಾಟಕ ಕಳ್ಳ ಸಾಗಾಣಿಕೆದಾರರು, ರೂಡಿಗತ ಅಪರಾದಿಗಳು, ಸರ್ಕಾರಿ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿಕೊಂಡಿರುವವರ ಮೇಲೆ ಮತ್ತು ಅದರಲ್ಲಿ ಶಾಮೀಲಾಗಿರುವ ಅಧಿಕಾರಿ/ ನೌಕರರ ಮೇಲೆ **" ಅಪಾಯಕಾರಿ ಚಟುವಟಿಕೆ ತಡೆಗಟ್ಟುವಿಕೆಗೆ ಅಧಿನಿಯಮ 1985 ರಡಿ"** ಕ್ರಮ ಕೈಗೊಳ್ಳುವುದು.

- ಇಡೀ ರಾಜ್ಯದಲ್ಲಿ ಸರ್ಕಾರಿ ಜಮೀನಿಗೆ ಅಂದರೆ ಸರ್ಕಾರ ಸ್ಥಳಿಯ, ಪ್ರಾಧಿಕಾರಗಳು ಶಾಸನಬದ್ಧವಾದ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗಳಿಗೆ ಸೇರಿದ ಭೂಮಿಗಳಿಗೆ ನಕಲಿ ದಾಖಲೆ ಸೃಷ್ಟಿಸಿಕೊಂಡಿರುವ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ಪತ್ತೆ ಹಚ್ಚಲು ಕ್ರಮ ತೆಗೆದುಕೊಳ್ಳುವುದು. ಮುಖ್ಯ [illegible] ಸರ್ಕಾರಿ ಇಲಾಖೆಗಳಲ್ಲಿ ಆಸ್ತಿವಹಿಯನ್ನು ನಿರ್ವಹಿಸಿರುವುದಿಲ್ಲ. ಎಲ್ಲಾ ಇಲಾಖೆಗಳಲ್ಲಿಯು ಆಸ್ತಿವಹಿಯನ್ನು ನಿಗದಿತ ಅವಧಿಯೊಳಗೆ ನಿರ್ವಹಿಸಲು ಕ್ರಮಕೈಗೊಳ್ಳುವುದು.

ಸಾರ್ವಜನಿಕ ಆಸ್ತಿಯ ರಕ್ಷಣೆ ಎಲ್ಲರ ಮೇಲಿದೆ ಅದರಲ್ಲಿಯೂ ಆಡಳಿತದ ಹೊಣೆ ಹೊತ್ತಿರುವವರ ಆದ್ಯಕರ್ತವ್ಯವಾಗಿರುವುದರಿಂದ ಮೇಲ್ಕಂಡ ವಿಷಯಗಳ ಬಗೆ ತುರ್ತು ಗಮನ ಹರಿಸಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು